| | 27 ಬಳ್ಳಾರಿ ಜಿಲ್ಲೆ | |
|---|---|---|
| 1 | ಹಗರಿಬೊಮ್ಮನಹಳ್ಳಿ | 10 |
| 2 | ಹಡಗಲಿ | 8 |
| 3 | ಹೊಸಪೇಟೆ | 4 |
| 4 | ಕೂಡ್ಲಗಿ | 28 |
| 5 | ಸಂಡೂರು | 18 |
| 6 | ಬಳ್ಳಾರಿ | 0 |
| 7 | ಶಿರಗುಪ್ಪಾ | 0 |
| | ಒಟ್ಟು | **68** |

**1305 (1794) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ)** – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಒಟ್ಟು ತಾಲ್ಲೂಕು ಕಛೇರಿಗಳು ಎಷ್ಟು,

ಆ) ಈ ಕಛೇರಿಗಳಿಗೆ ಸಿಬ್ಬಂದಿಗಳನ್ನು ತುಂಬಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು (ವಿವರಗಳನ್ನು ಒದಗಿಸುವುದು) ?

**ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು)**

ಅ) 176

ಆ) 1) ಕರ್ನಾಟಕ ಲೋಕಸೇವಾ ಆಯೋಗದಿಂದ ಗುಂಪು 'ಬಿ' ತಹಶೀಲ್ದಾರರುಗಳ ಹುದ್ದೆಗಳಿಗೆ ನೇರ ನೇಮಕಾತಿಯ ಮೂಲಕ ಆಯ್ಕೆಯಾಗಿ ಬಂದಿರುವ ತಹಶೀಲ್ದಾರರುಗಳಲ್ಲಿ 158 ತಹಶೀಲ್ದಾರರುಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ ಸದರಿ ತಹಶೀಲ್ದಾರರುಗಳು ಪ್ರಸ್ತುತ ತರಬೇತಿಯಲ್ಲಿದ್ದು, ಪರಿವೀಕ್ಷಣಾ ಅವಧಿಯಲ್ಲಿ ಇರುತ್ತಾರೆ ತರಬೇತಿ ಅವಧಿ ಮುಗಿದ ಕೂಡಲೇ ಹಾಗೂ ಶಿರಸ್ತೇದಾರ್‌ಗಳನ್ನು ಪದೋನ್ನತಿ ನೀಡಿ, ಆದಷ್ಟು ಶೀಘ್ರವಾಗಿ ಖಾಲಿಯಿರುವ ತಹಶೀಲ್ದಾರ್ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು

2) ಶಿರಸ್ತೇದಾರ್ ಹುದ್ದೆಗಳನ್ನು ಪ್ರದಸ ಹಾಗೂ ರಾಜಸ್ವ ನಿರೀಕ್ಷಕ ಹುದ್ದೆಗಳಿಂದ ಶೇ 95 ಹಾಗು ಶೇ 5 ರಷ್ಟನ್ನು ಶೀಘ್ರಲಿಪಿಗಾರರಿಂದ ಮುಂಬಡ್ತಿ ಮೂಲಕ ಭರ್ತಿ ಮಾಡಲಾಗುತ್ತದೆ

3) ದ್ವಿದ ಸ ವೃಂದಕ್ಕೆ ಶೇ 75 ರಷ್ಟು ನೇರ ನೇಮಕಾತಿ ಮೂಲ ಹಾಗೂ ಶೇ 25 ರಷ್ಟು ವಾಹನ ಚಾಲಕರು – ಡಿ ದರ್ಜೆ ನೌಕರರಿಂದ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು

4) ಗ್ರೂಪ್–ಡಿ ಹುದ್ದೆಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನೇಮಕಾತಿ ಪ್ರಾಧಿಕಾರಿಗಳಾಗಿರುತ್ತಾರೆ ಈ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳ ಪಟ್ಟಿ ಪಡೆದು ನೇಮಕ ಮಾಡುತ್ತಾರೆ

**1306 (1795) ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ (ಕುಂದಗೋಳ).–** ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಅಭಿವೃದ್ಧಿಗೆ ಬಿಡುಗಡೆ ಮಾಡಿದ ಹಣವೆಷ್ಟು,

ಆ) ವಿವಿಧ ಯೋಜನೆಗೆ ಬಿಡುಗಡೆ ಮಾಡಲಾದ ಹಣವೆಷ್ಟು?

**ಶ್ರೀ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)**

ಅ) 2005–06ನೇ ಸಾಲಿನಲ್ಲಿ ಎಲ್ಲ ಯೋಜನೆಗಳನ್ನು ಸೇರಿಸಿ ಒಟ್ಟು ರೂ 50 974 (ಲಕ್ಷದಲ್ಲಿ) ಹಣ ಬಿಡುಗಡೆಯಾಗಿದೆ

ಆ) 2005–06ನೇ ಸಾಲಿನಲ್ಲಿ ವಿವಿಧ ಯೋಜನೆಗಳಿಗೆ ಬಿಡುಗಡೆ ಮಾಡಲಾದ ಹಣ ಕೆಳಗಿನಂತಿದೆ